# ಸಮಾಜಶಾಸ್ತ್ರ
# ಅಧ್ಯಾಯ-1.
# ಸಾಮಾಜಿಕ ಸ್ತರ ವಿನ್ಯಾಸ

**I ಖಾಲಿ ಜಾಗವನ್ನು ಭರ್ತಿ ಮಾಡಿರಿ**

1. ಸಂವಿಧಾನದ **30**ನೇ ವಿಧಿಯು ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ
2. ಅಸ್ಪೃಶ್ಯತೆಯ ಆಚರಣೆಯನ್ನು ಸಂವಿಧಾನದ **17**ನೇ ವಿಧಿಯು ನಿಷೇಧಿಸಿದೆ
3. ಅಸ್ಪೃಶ್ಯತಾ ಅಪರಾಧ ಕಾಯ್ದೆ **1955** ರಲ್ಲಿ ಜಾರಿಗೆ ಬಂದಿತು

**II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?
    - ಸಾರ್ವಜನಿಕ ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆಗಳ ನಿರಾಕರಣೆ
    - ಸಾರ್ವತ್ರಿಕ ಆರೋಗ್ಯದ ನಿರಾಕರಣೆ
    - ಆದಾಯ ಹಾಗೂ ಲಿಂಗ ಆಧಾರಿತ ತಾರತಮ್ಯ
2. ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ?
    - ಮಹಿಳೆಯನ್ನು ಸಮಾಜ ಪರಿಗಣಿಸುವ ರೀತಿ
    - ಮಹಿಳೆಗೆ ಶಿಕ್ಷಣದ ನಿರಾಕರಣೆ
    - ಮಹಿಳೆಗೆ ಆಸ್ತಿ ಹಕ್ಕಿನ ನಿರಾಕರಣೆ
    - ಮಹಿಳೆಗೆ ರಾಜಕೀಯ ಹಕ್ಕಿನ ನಿರಾಕರಣೆ
3. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳಾವುವು?
    - ಇದು ಸಾರ್ವತ್ರಿಕವಾದುದು
    - ಇದು ಪುರಾತನವಾದುದು
    - ಬೇರೆ ಬೇರೆ ರೂಪದಲ್ಲಿ ಇದು ವ್ಯಕ್ತವಾಗುತ್ತದೆ
    - ಇದು ಸ್ವಭಾವತಹ ಸಾಮಾಜಿಕವಾದುದು
4. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ
    - ಸಾಮಾಜಿಕವಾಗಿ ಅತ್ಯಂತ ಕೆಳ ಹಂತದ ಆಚರಣೆಯಾಗಿದೆ
    - ಶಿಕ್ಷಣದಿಂದ ಇವರನ್ನು ವಂಚಿಸಲಾಗಿದೆ
    - ಆಸ್ತಿಯ ಹಕ್ಕನ್ನು ನಿರಾಕರಣೆ ಮಾಡಲಾಗಿದೆ
    - ರಾಜಕೀಯದಲ್ಲಿ ಭಾಗವಹಿಸುವಿಕೆಯನ್ನು ಇವರಿಗೆ ನಿರಾಕರಿಸಲಾಗಿದೆ
    - ಇದು  ಮಾನವ ಹಕ್ಕುಗಳ ನಿರಾಕರಣೆ ಮಾಡುತ್ತದೆ
    - ದುರ್ಬಲರ ಶೋಷಣೆಗೆ ಕಾರಣವಾಗಿದೆ

1. ಅಸ್ಪೃಶ್ಯತೆ ನಿವಾರಣೆಯ ಸಂವಿಧಾನಾತ್ಮಕ ಹಾಗೂ ಕಾನೂನು ಪರಿಹಾರಗಳಾವುವು?
    - ಸಂವಿಧಾನದ ವಿಧಿ 17 ರ ಪ್ರಕಾರ ಇದರ ಆಚರಣೆ ಶಿಕ್ಷಾರ್ಹ ಅಪರಾಧ
    - 1955 ರ ಅಸ್ಪೃಶ್ಯತೆ  ಅಪರಾಧಗಳ ಕಾಯ್ಧೆ
    - 1976 ರ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ಧೆ
    - ಸಮಾನತೆಯ ಹಕ್ಕನ್ನು ಜಾರಿಗೆ ತಂದಿರುವುದು
    - ರಾಜಕೀಯ, ಆರ್ಥಿಕ, ಶೈಕ್ಷಣಿಕ, ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿ ಜಾರಿಗೆ ತಂದಿರುವುದು

- 1989 ರ ಶಾಸನವು ಅಸ್ಪೃಶ್ಯತೆ ನಿರ್ಮೂಲನೆಯ ವಿಶೇಷ ಜವಾಬ್ಧಾರಿಯನ್ನು ರಾಜ್ಯಗಳಿಗೆ ವಹಿಸಿದೆ

# ಅಧ್ಯಾಯ-2.
# ದುಡಿಮೆ ಮತ್ತು ಆರ್ಥಿಕ ಜೀವನ

**I ಖಾಲಿ ಜಾಗವನ್ನು ಭರ್ತಿ ಮಾಡಿರಿ**

1. ಶ್ರಮ ವಿಭಜನೆಯು **ವಿಶೇಷ ಪರಿಣತಿ** ಗೆ ಕಾರಣವಾಗುವುದು
2. ಭೂ ರಹಿತ ಕೃಷಿ ಕಾರ್ಮಿಕರನ್ನು **ಅಸಂಘಟಿತ ಕೆಲಸಗಾರರು** ಎಂದು ಕರೆಯುತ್ತಾರೆ
3. ವೈದ್ಯಕೀಯ ಸಂಸ್ಥೆಗಳ ಕಾರ್ಮಿಕರನ್ನು **ಸಂಘಟಿತ ಕೆಲಸಗಾರರು** ಎಂದು ಕರೆಯುತ್ತಾರೆ

**II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಶ್ರಮ ವಿಭಜನೆ ಎಂದರೇನು?
   ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ಪರಿಣತಿ, ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು ಶ್ರಮ ವಿಭಜನೆ ಎನ್ನುವರು
2. ಸಂಭಾವನೆ ಸಹಿತ ದುಡಿಮೆ ಎಂದರೇನು?
   ಯಾವ ಕೆಲಸವನ್ನು ವ್ಯಕ್ತಿ ಮಾಡಿದಾಗ ಆತನಿಗೆ ಆರ್ಥಿಕ ರೂಪದ ಪ್ರತಿಫಲ ಲಭ್ಯವಾಗುವುದೊ ಅಂತಹ ದುಡಿಮೆಯನ್ನು ಸಂಭಾವನೆ ಸಹಿತ ದುಡಿಮೆ ಎನ್ನುವರು
3. ಸಂಭಾವನೆ ರಹಿತ ದುಡಿಮೆ ಎಂದರೇನು?
   ಯಾವ ಕೆಲಸವನ್ನು ವ್ಯಕ್ತಿ ಮಾಡಿದಾಗ ಆತನಿಗೆ ಆರ್ಥಿಕ ರೂಪದ ಪ್ರತಿಫಲ ಲಭ್ಯವಾಗುವುದಿಲ್ಲವೊ ಅಂತಹ ದುಡಿಮೆಯನ್ನು ಸಂಭಾವನೆ ರಹಿತ ದುಡಿಮೆ ಎನ್ನುವರು
4. ಸಂಘಟಿತ ದುಡಿಮೆ ವಲಯ ಎಂದರೇನು?
   ಯಾವ ಕೆಲಸಗಾರರು ನಿಗಧಿತ ವೇತನ, ಭತ್ಯೆ, ರಜೆ ಸೌಲಭ್ಯಗಳು, ವಿದ್ಯಾರ್ಹತೆ ಹೊಂದಿ ಕಾನೂನಿನ ಚೌಕಟ್ಟಿನಡಿಯಲ್ಲಿ ಕಾರ್ಯನಿರ್ವಹಿಸುತ್ತಾರೊ ಅಂತಹ ವಲಯವನ್ನು ಸಂಘಟಿತ ದುಡಿಮೆ ವಲಯ ಎನ್ನುವರು
5. ಅಸಂಘಟಿತ ದುಡಿಮೆ ವಲಯ ಎಂದರೇನು?
   ಯಾವ ಕೆಲಸಗಾರರು ನಿಗಧಿತ ವೇತನ, ಭತ್ಯೆ, ರಜೆ ಸೌಲಭ್ಯಗಳು, ವಿದ್ಯಾರ್ಹತೆಗಳಿಲ್ಲದೇ ಕಾನೂನಿನ ಚೌಕಟ್ಟಿಗೆ ಒಳಪಡದೇ ಕಾರ್ಯನಿರ್ವಹಿಸುತ್ತಾರೊ ಅಂತಹ ವಲಯವನ್ನು ಅಸಂಘಟಿತ ದುಡಿಮೆ ವಲಯ ಎನ್ನುವರು
6. ಅಸಂಘಟಿತ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಾವುವು?
   - ಇವರಿಗೆ ಕೆಲಸದ ಭದ್ರತೆ ಇರುವುದಿಲ್ಲ
   - ಯಾವುದೇ ನಿಯಮ-ಕಾಯ್ದೆಗಳು ಅನ್ವಯವಾಗುವುದಿಲ್ಲ
   - ಯಾವುದೇ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ
   - ವಿರಾಮ ವೇತನವಿರುವುದಿಲ್ಲ
   - ನಿವೃತ್ತಿ ವೇತನದ ಸೌಲಭ್ಯವಿರುವುದಿಲ್ಲ
   - ಕೂಲಿದರಗಳು ಕಡಿಮೆಯಾಗಿರುತ್ತದೆ.

**III ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಸಂಘಟಿತ ದುಡಿಮೆಯ ಪ್ರಕಾರಗಳು ಯಾವುವು? ತಿಳಿಸಿ
   - ಶಾಲೆಗಳು
   - ಆಸ್ಪತ್ರೆಗಳು
   - ಕೈಗಾರಿಕೆಗಳು

- ಸರ್ಕಾರಿ ಸೇವೆಗಳು
- ಬ್ಯಾಂಕುಗಳು
- ವಿಮಾ ಕಂಪನಿಗಳು
- ಮಿಲಿಟರಿ ಸೇವೆ

2. ದುಡಿಮೆಯ ತಾರತಮ್ಯವನ್ನು ವಿವರಿಸಿ
   - ಲಿಂಗ ಆಧಾರಿತ ತಾರತಮ್ಯ
   - ಜಾತಿ ಆಧಾರಿತ ತಾರತಮ್ಯ
   - ಪ್ರಾದೇಶಿಕ ತಾರತಮ್ಯ
   - ಧಾರ್ಮಿಕ ತಾರತಮ್ಯ
3. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ
   - ವಸತಿ ಸಮಸ್ಯೆ
   - ಆರೋಗ್ಯ ಸೌಲಭ್ಯಗಳ ಕೊರತೆ
   - ಕುಡಿಯುವ ನೀರಿನ ಕೊರತೆ
   - ದುಡಿಮೆಯಲ್ಲಿ ಸಮಾನ ಅವಕಾಶದ ಕೊರತೆ
   - ನಿವೃತ್ತಿ ವೇತನದ ಸಮಸ್ಯೆ
   - ವಿಮಾ ಸೌಲಭ್ಯದ ಕೊರತೆ
   - ರಜಾ ಸೌಲಭ್ಯದ ಸಮಸ್ಯೆ
4. ಸಂಘಟಿತ ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರಿಗಿರುವ ವ್ಯತ್ಯಾಸಗಳೇನು ?

| ಸಂಘಟಿತ ಕಾರ್ಮಿಕರು | ಅಸಂಘಟಿತ ಕಾರ್ಮಿಕರು |
|---|---|
| • ಇವರು ಸೇವಾ ನಿಯಮಾವಳಿಗಳಿಗೆ ಬದ್ಧರಾಗಿರುತ್ತಾರೆ.<br>• ನಿಗಧಿತ ವೇತನ,ಭತ್ಯೆ ಪಡೆಯುತ್ತಾರೆ<br>• ಅಧಿಕಾರದ ಏಣಿ–ಶ್ರೇಣಿ ವ್ಯವಸ್ಥೆ ಇರುತ್ತದೆ<br>• ಶೈಕ್ಷಣಿಕ ಅರ್ಹತೆ ಹೊಂದಿರುತ್ತಾರೆ<br>• ವೈದ್ಯಕೀಯ ಸೌಲಭ್ಯ ಪಡೆದಿರುತ್ತಾರೆ.<br>• ನಿಗಧಿತ ಸಮಯದಲ್ಲಿ ಮಾತ್ರ ಕೆಲಸ ಮಾಡುತ್ತಾರೆ. | • ಇವರಿಗೆ ಸೇವಾ ನಿಯಮಾವಳಿಗಳಿರುವುದಿಲ್ಲ<br>• ನಿಗಧಿತ ವೇತನ, ಭತ್ಯೆಯ ಸೌಲಭ್ಯ ಇರುವುದಿಲ್ಲ.<br>• ಅಧಿಕಾರದ ಏಣಿ–ಶ್ರೇಣಿ ವ್ಯವಸ್ಥೆ ಇರುವುದಿಲ್ಲ<br>• ಶೈಕ್ಷಣಿಕ ಅರ್ಹತೆ ಹೊಂದಿರುವುದಿಲ್ಲ<br>• ವೈದ್ಯಕೀಯ ಸೌಲಭ್ಯ ಇರುವುದಿಲ್ಲ.<br>• ಸಮಯದ ಮಿತಿಯಿಲ್ಲದೇ ಕೆಲಸ ಮಾಡುತ್ತಾರೆ. |

# ಅಧ್ಯಾಯ –3.

## ಸಾಮಾಜಿಕ ಚಳವಳಿಗಳು

**I ಖಾಲಿ ಜಾಗವನ್ನು ಭರ್ತಿ ಮಾಡಿರಿ**

1. ಪರಿಸರ ಚಳವಳಿ ಎಂದರೆ **ಜೈವಿಕ ಪರಿಸರ ರಕ್ಷಣೆಗಾಗಿನ ಹೋರಾಟ**
2. 'ನರ್ಮದಾ ಆಂದೋಲನ'ದ ನೇತೃತ್ವ ವಹಿಸಿದ್ಧವರು **ಮೇಧಾ ಪಾಟ್ಕರ್ ಹಾಗೂ ಬಾಬಾ ಆಮ್ಟೆ**
3. ಡಾ.ಶಿವರಾಮ ಕಾರಂತರು **ಕೈಗಾ** ದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವುದನ್ನು ವಿರೋಧಿಸಿದರು
4. ಮಹಿಳಾ ಚಳವಳಿ ಎಂದರೆ **ಲಿಂಗ ಅಸಮಾನತೆಯ ವಿರುದ್ದದ ಹೋರಾಟ**

**II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಸಮೂಹ ವರ್ತನೆಯ ಮಾದರಿಗಳಾವುವು?
    - ಪರಿಸರ ರಕ್ಷಣಾ ಚಳವಳಿಗಳು
    - ಮಹಿಳಾ ಚಳವಳಿಗಳು
    - ಕಾರ್ಮಿಕ ಚಳವಳಿಗಳು
    - ರೈತರ ಚಳವಳಿಗಳು
2. ಮಹಿಳಾ ಚಳವಳಿಗಳೆಂದರೇನು? ಉದಾಹರಣೆ ನೀಡಿ
   ಲಿಂಗ ಆಧಾರಿತ ತಾರತಮ್ಯ ನಿವಾರಣೆಯ ಚಳವಳಿಯೆ ಮಹಿಳಾ ಚಳವಳಿ
   ಉದಾಹರಣೆ :- ವರದಕ್ಷಿಣೆ ವಿರೋಧಿ ಚಳವಳಿ. ಮರ್ಯಾದ ಹತ್ಯೆಯ ವಿರುದ್ಧದ ಚಳವಳಿ
3. ಜನಮಂದೆ ಎಂದರೇನು? ಉದಾಹರಣೆ ನೀಡಿ
   ಒಂದು ಆಕಸ್ಮಿಕ ಕಾರಣದಿಂದ ಯಾವುದೇ ನೀರಿಕ್ಷೆ ಮತ್ತು ಯೋಜನೆ ಇಲ್ಲದೇ ಒಂದು ಘಟನೆಯ ಸುತ್ತ ನೆರೆದಿರುವ ಜನ ಸಮೂಹವೇ ಜನಮಂದೆ

1. ಜನಮಂದೆಯ ಲಕ್ಷಣಗಳಾವುವು ?
    - ಇದು ತಾತ್ಕಾಲಿಕ ಸ್ವರೂಪದ ಸಮೂಹವಾಗಿರುತ್ತದೆ
    - ಯಾವುದೊ ಒಂದು ನಿರ್ಧಿಷ್ಟ ಸ್ಥಳದಲ್ಲಿ ಒಟ್ಟಾಗಿ ಸೇರಿರುತ್ತಾರೆ
    - ಇದರ ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆ ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ
    - ವ್ಯಕ್ತಿಯ ಅಂತರಾಳದಲ್ಲಿ ಹುದುಗಿರುವ ಭಾವನೆಗಳು ಕೆಲವೊಮ್ಮೆ ಸ್ಪೋಟಗೊಳ್ಳುವುದುಂಟು
2. ದೊಂಬಿಯ ಪ್ರಮುಖ ಲಕ್ಷಣಗಳೇನು ?
    - ಕನಿಷ್ಟ ಮಟ್ಟದ ಉದ್ದೇಶ ಇರುವುದಿಲ್ಲ
    - ಸಿಕ್ಕಿದೆಲ್ಲವನ್ನು ಹಾಳುಮಾಡುತ್ತಾರೆ
    - ಗೊಂದಲವನ್ನು ಸೃಷ್ಟಿಮಾಡುತ್ತಾರೆ
    - ಕಾನೂನು ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿರುತ್ತವೆ
3. ಚಿಪ್ಕೋ ಚಳುವಳಿ ಹಾಗೂ ನರ್ಮದಾ ಆಂದೋಲನದ ನಾಯಕರು ಯಾರು ?
   **ಚಿಪ್ಕೋ ಚಳುವಳಿ** : ಶ್ರೀ ಸುಂದರ್ ಲಾಲ್ ಬಹುಗುಣ ಮತ್ತು ಶ್ರೀ ಚಂಡಿ ಪ್ರಸಾದ್ ಭಟ್
   **ನರ್ಮದಾ ಆಂದೋಲನ** : ಮೇಧಾ ಪಾಟ್ಕರ್ ಮತ್ತು ಬಾಬಾ ಆಮ್ಟೆ
4. ಸಮೂಹ ವರ್ತನೆಯ ವಿವಿಧ ಮಾದರಿಗಳಾವುವು ?
   ಜನಮಂದೆ,, ದೊಂಬಿ, ಸಾಮಜಿಕ ಆಂದೋಲನ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ
5. ಸಮೂಹ ವರ್ತನೆ ಎಂದರೇನು?
   ಸಾಕಷ್ಟು ದೊಡ್ಡ ಸಂಖ್ಯೆಯ ಜನರ ಆಕಸ್ಮಿಕವಾದ ಹಾಗೂ ಯೋಜನಾಬದ್ಧವಲ್ಲದ ರೀತಿಯ ಆಲೋಚನೆ, ಭಾವನೆ, ವರ್ತನೆಯೇ ಸಮೂಹ ವರ್ತನೆ
6. ಪರಿಸರ ಮಾಲಿನ್ಯದ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ
   ಭೂಮಿ, ನೀರು, ಗಾಳಿ ಮತ್ತು ಜೀವಮಂಡಲವನ್ನೊಳಗೊಂಡ ನಮ್ಮ ಸುತ್ತಲಿನ ಪರಿಸರವು ವಿಷಕಾರಕ ಹಾಗೂ ರಾಸಾಯನಿಕ ಅಂಶಗಳಿಂದ ಕಲುಷಿತವಾಗುವುದನ್ನು ಪರಿಸರ ಮಾಲಿನ್ಯ ಎನ್ನುವರು
   **ಪರಿಸರ ಮಾಲಿನ್ಯದ ಸ್ವರೂಪ**
    - ಅರಣ್ಯಗಳ ಸಂರಕ್ಷಣೆ

- ವನ್ಯ ಜೀವಿಗಳ ಸಂರಕ್ಷಣೆ
- ಬುಡಕಟ್ಟು ಜನರ ಜೀವನ ಸಂರಕ್ಷಣೆ
- ಸಂಪನ್ಮೂಲಗಳ ಅತಿಯಾದ ಬಳಕೆ
- ಭೂ ಗ್ರಹದ ಸಂರಕ್ಷಣೆ

# ಅಧ್ಯಾಯ –4.
# ಸಾಮಾಜಿಕ ಸಮಸ್ಯೆಗಳು

**I ಖಾಲಿ ಜಾಗವನ್ನು ಭರ್ತಿ ಮಾಡಿರಿ**

1. ಸಂವಿಧಾನದ **24**ನೇ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ
2. ಬಾಲ ವಿವಾಹ ನಿಷೇಧ ಕಾಯ್ದೆ ಜಾರಿಗೆ ಬಂದ ವರ್ಷ **2006**
3. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ **1986** ರಲ್ಲಿ **'ರಾಷ್ಟ್ರೀಯ ನೀತಿ'** ಜಾರಿಗೊಳಿಸಿತು
4. ಹೆಣ್ಣುಭ್ರೂಣ ಹತ್ಯೆಯನ್ನು ನಿಷೇಧಿಸುವ ಕಾಯಿದೆ **1994** ರಲ್ಲಿ ಜಾರಿಗೆ ಬಂದಿತು
5. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ 2012 ರಲ್ಲಿ ಜಾರಿಗೆ ಬಂದಿತು

**II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಭಾರತದ ಯಾವುದಾದರೂ ಎರಡು ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿ
   - ಬಾಲ್ಯ ವಿವಾಹ
   - ಬಾಲ ಕಾರ್ಮಿಕ
2. ಬಾಲ ಕಾರ್ಮಿಕರೆಂದರೆ ಯಾರು?
   14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹಣ ಸಂಪಾದನೆಯ ಉದ್ಧೇಶದಿಂದ ದುಡಿಮೆ ಮಾಡುವ ಮಕ್ಕಳೇ ಬಾಲ ಕಾರ್ಮಿಕರು
3. ಹೆಣ್ಣು ಭ್ರೂಣಹತ್ಯೆ ಎಂದರೇನು?
   ಗರ್ಭದಲ್ಲಿರುವ ಹೆಣ್ಣು ಭ್ರೂಣವನ್ನು ಗರ್ಭದಲ್ಲಿ ಕೊಂದು ಹಾಕುವ ಅಮಾನವೀಯ ಪದ್ಧತಿಯೇ ಹೆಣ್ಣು ಭ್ರೂಣಹತ್ಯೆ.
4. ಬಾಲ್ಯ ವಿವಾಹ ಎಂದರೇನು?
   21 ವರ್ಷದೊಳಗಿನ ಹುಡುಗ ಹಾಗೂ 18 ವರ್ಷದೊಳಗಿನ ಹುಡುಗಿಗೆ ಮಾಡುವ ವಿವಾಹವೇ ಬಾಲ್ಯ ವಿವಾಹ
5. ಲಿಂಗ ತಾರತಮ್ಯ ಎಂದರೇನು?
   ಲಿಂಗ ಆಧಾರಿತವಾಗಿ ಮಹಿಳೆಗಾಗುವ ತಾರತಮ್ಯವೇ ಲಿಂಗ ತಾರತಮ್ಯ
6. ಮಕ್ಕಳ ಸಾಗಾಣಿಕೆ ಎಂದರೇನು?
   18 ವರ್ಷದೊಳಗಿನ ಯಾವುದೇ ಮಕ್ಕಳನ್ನು ನೇಮಕಾತಿ, ವರ್ಗಾವಣೆ, ಸ್ವಾಧೀನ ಪಡಿಸಿಕೊಳ್ಳುವುದು ಹಾಗೂ ಶೋಷಣೆಗೊಳಪಡಿಸುವ ಕೃತ್ಯವನ್ನು ಮಕ್ಕಳ ಸಾಗಾಣಿಕೆ ಎನ್ನುವರು
7. ಬಾಲ ಕಾರ್ಮಿಕರನ್ನು ಶಾಲೆಗೆ ಕರೆತರುವ ಕರ್ನಾಟಕ ಸರ್ಕಾರದ ಕಾರ್ಯಕ್ರಮ ಯಾವುದು ?
   'ಕೂಲಿಯಿಂದ ಶಾಲೆಗೆ' ಕಾರ್ಯಕ್ರಮ
8. 'Pre Conception and pre-Natal Diagnostic techniques act' ಕಾಯಿದೆಯನ್ನು ಏಕೆ ಜಾರಿಗೆ ತರಲಾಗಿದೆ?

ಆಧುನಿಕ ತಂತ್ರಜ್ಞಾನದ ಮುಖಾಂತರ ಭ್ರೂಣದ ಲಿಂಗ ಪತ್ತೆ ಪರೀಕ್ಷೆಗಳನ್ನು ನಿಷೇಧಿಸುವ ಸಲುವಾಗಿ ‘Pre Conception and pre-Natal Diagnostic techniques act’ (PCPNDT-1994) ಕಾಯಿದೆಯನ್ನು ಜಾರಿಗೆ ತರಲಾಗಿದೆ

**III ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಬಾಲ ಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು? ತಿಳಿಸಿ
   - ಕಡು ಬಡತನ
   - ಕೌಟುಂಬಿಕ ಕಲಹ
   - ಅನಕ್ಷರತೆ
   - ವಿವಾಹ ವಿಚ್ಛೇದನಗಳು
2. ಬಾಲ್ಯ ವಿವಾಹ ಸಮಸ್ಯೆಯಿಂದಾಗುವ ಪರಿಣಾಮಗಳೇನು?
   - ಮಕ್ಕಳ ಸಾಮಾಜಿಕರಣ ಅಸಾಧ್ಯವಾಗುವುದು
   - ಮಕ್ಕಳ ಮಾನಸಿಕ ಭಾವನಾತ್ಮಕ ಬೆಳವಣಿಗೆ ಕುಂಠಿತ
   - ಅನಾರೋಗ್ಯ
   - ಬಾಲ ವಿಧವೆಯಾಗುವ ಸಂಭವನೀಯತೆ
3. ಬಾಲ ಕಾರ್ಮಿಕ ಸಮಸ್ಯೆಯ ನಿರ್ಮೂಲನ ಕ್ರಮಗಳಾವುವು?
   - ಸಂವಿಧಾನದ 24ನೇ ವಿಧಿ ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಿದೆ
   - 1986 ರಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ನಿಷೇಧ ಕಾಯಿದೆ ಜಾರಿಗೆ ತರಲಾಗಿದೆ
   - ಕೂಲಿಯಿಂದ ಶಾಲೆಗೆ ಕಾರ್ಯಕ್ರಮದ ಅನುಷ್ಠಾನ
   - 2009 ರ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ
4. ಹೆಣ್ಣು ಭ್ರೂಣಹತ್ಯೆಯ ದುಷ್ಪರಿಣಾಮಗಳಾವುವು?
   - ಪುರುಷ ಮತ್ತು ಮಹಿಳೆಯರ ನಡುವೆ ತಾರತಮ್ಯ ಸೃಷ್ಟಿಯಾಗುವುದು
   - ಸಮಾಜದಲ್ಲಿ ಅನೈತಿಕತೆ ಬೆಳೆಯುವುದು
   - ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುವುವು
   - ಮಹಿಳೆಯರ ಅನುಪಾತ ಕುಸಿಯುವುದು
5. ಲಿಂಗ ತಾರತಮ್ಯದ ಪ್ರಕಾರಗಳಾವುವು?
   - ಆನನ ಪ್ರಮಾಣದಲ್ಲಿ ತಾರತಮ್ಯ
   - ಕೌಟುಂಬಿಕ ತಾರತಮ್ಯ
   - ಒಡೆತನದ ತಾರತಮ್ಯ
   - ಅವಕಾಶಗಳಲ್ಲಿನ ತಾರತಮ್ಯ
6. ಹಸಿವಿನ ದುಷ್ಪರಿಣಾಮಗಳಾವುವು?
   - ಆರೋಗ್ಯದ ಮಟ್ಟದಲ್ಲಿ ಕುಸಿತ
   - ಭಯೋತ್ಪಾದಕತೆಗೆ ಕಾರಣ
   - ಬಡತನಕ್ಕೆ ಕಾರಣ
   - ಅಪೌಷ್ಟಿಕತೆಗೆ ಕಾರಣವಾಗುವುದು